www.InyaTrust.com

**ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯ ಕೂಡದು**

**7031 2013 (2)**

**ವರ್ಷನ್ ಕೋಡ್**

**F**

# ಜನರಲ್ ಲಾ
## (ಭಾಗ – 2)

Shahina.

**ನೋಂದಣಿ ಸಂಖ್ಯೆ** 82860

F

***ಗರಿಷ್ಠ ಸಮಯ : 2 ಘಂಟೆಗಳು*** ***ಗರಿಷ್ಠ ಅಂಕಗಳು : 100***

### ಅಭ್ಯರ್ಥಿಗಳಿಗೆ ಸೂಚನೆಗಳು

1. ಬಲಬದಿಯಲ್ಲಿರುವ ಪೇಪರ್ ಸೀಲನ್ನು ಬೆಳಿಗ್ಗೆ **10.00** ಘಂಟೆಗೆ **(ಮೊದಲ ಅಧಿವೇಶನ)** ಮತ್ತು ಮಧ್ಯಾಹ್ನ **2.00** ಘಂಟೆಗೆ **(ಎರಡನೆಯ ಅಧಿವೇಶನ)** ಎರಡನೆಯ ಘಂಟೆ ಬಾರಿಸಿದ ನಂತರ ತೆರೆಯಬಹುದು.
2. ಪರೀಕ್ಷೆ ಪ್ರಾರಂಭಗೊಂಡ ತಕ್ಷಣವೇ ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಇತ್ಯಾದಿಗಳನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡು ಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
3. **ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ನೋಂದಣಿ ಸಂಖ್ಯೆ ಹಾಗೂ ಪ್ರಶ್ನೆ ಪತ್ರಿಕೆಯ ಶ್ರೇಣಿಯನ್ನು ಅಂದರೆ A, B, C, D, E, F, G ಅಥವಾ H ಗಳನ್ನು ತಪ್ಪಿಲ್ಲದಂತೆ ಕಡ್ಡಾಯವಾಗಿ ಗುರುತಿಸುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ. ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿ ಮಾಡದೆ ಹಾಗೆಯೇ ಬಿಟ್ಟಲ್ಲಿ ಅಥವಾ ಭರ್ತಿ ಮಾಡಿದ ಮಾಹಿತಿಯಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ರದ್ದುಪಡಿಸಲಾಗುವುದು.**
4. ಪ್ರಶ್ನೆ ಪುಸ್ತಿಕೆಯು**50** ಪ್ರಶ್ನೆಗಳನ್ನು ಒಳಗೊಂಡಿದ್ದು, ಪ್ರತಿ ಪ್ರಶ್ನೆಯು ಆಂಗ್ಲ ಹಾಗೂ ಕನ್ನಡ ಭಾಷೆಯಲ್ಲಿ ಮುದ್ರಿತವಾಗಿರುತ್ತದೆ. (English language comprehension ಪ್ರಶ್ನೆಗಳನ್ನು ಹೊರತು ಪಡಿಸಿ). ಪ್ರತಿ ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ನೀಡಲಾಗಿದ್ದು, ಕೇವಲ ಒಂದು ಉತ್ತರವನ್ನು ಮಾತ್ರ ಉತ್ತರ ಪತ್ರಿಕೆಯಲ್ಲಿ ಗುರುತಿಸತಕ್ಕದ್ದು. ಒಂದು ವೇಳೆ ಒಂದಕ್ಕಿಂತ ಹೆಚ್ಚಿನ ಉತ್ತರವು ಸಮಂಜಸವೆಂದು ಕಂಡುಬಂದಲ್ಲಿ ಅತ್ಯಂತ ಸೂಕ್ತವಾದಂತಹ ಉತ್ತರವನ್ನು ಗುರುತಿಸತಕ್ಕದ್ದು. ಯಾವುದೇ ಕಾರಣಕ್ಕೂ **ಒಂದಕ್ಕಿಂತ** ಹೆಚ್ಚಿನ ಉತ್ತರವನ್ನು ಗುರುತಿಸತಕ್ಕದ್ದಲ್ಲ.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾದ ಓ.ಎಂ.ಆರ್. ಉತ್ತರ ಪತ್ರಿಕೆಯ ಹಾಳೆಯ ಮೇಲೆ **ಕಪ್ಪು ಅಥವಾ ನೀಲಿ ಶಾಯಿಯ ಬಾಲ್ ಪಾಯಿಂಟ್** ಪೆನ್ನಿನಿಂದ ಗುರುತು ಮಾಡಬೇಕು. ಈ ಬಗ್ಗೆ ಪ್ರವೇಶ ಪತ್ರದ ಜೊತೆಗೆ ರವಾನಿಸಿರುವ "**ಅಭ್ಯರ್ಥಿಗಳಿಗೆ ಸೂಚನೆಗಳು**" ದಲ್ಲಿ ತಿಳಿಸಿರುವ ವಿಧಾನವನ್ನು ಅನುಸರಿಸಿ ಎಚ್ಚರಿಕೆಯಿಂದ ಗುರುತು ಮಾಡಬೇಕು. ಒಂದು ವೇಳೆ ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚಿನ ವೃತ್ತಗಳನ್ನು ಭರ್ತಿ ಮಾಡಿದಲ್ಲಿ ಯಾವುದೇ ಅಂಕಗಳನ್ನು ನೀಡಲಾಗುವುದಿಲ್ಲ.
6. ಚಿತ್ತು ಬರಹಕ್ಕಾಗಿ ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಇದಕ್ಕಾಗಿ ನೀಡಲಾದ/ ಆಯೋಗವು ಒದಗಿಸುವ ಹಾಳೆಗಳನ್ನು ಮಾತ್ರ ಉಪಯೋಗಿಸತಕ್ಕದ್ದು. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವುದೇ ರೀತಿಯ ಬರಹ ಅಥವಾ ಗುರುತನ್ನು ಮಾಡತಕ್ಕದ್ದಲ್ಲ.
7. ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತವೆ. ಕನ್ನಡ ಪ್ರಶ್ನೆಗಳಲ್ಲಿ ಸಂದೇಹ ಉಂಟಾದರೆ, ದಯವಿಟ್ಟು ಆಂಗ್ಲ ಭಾಷೆಯ ಪ್ರಶ್ನೆಗಳನ್ನು ಗಮನಿಸುವುದು.
8. ಯಾವುದೇ ರೀತಿಯ ಕ್ಯಾಲ್ಕ್ಯುಲೇಟರ್‌ಗಳನ್ನು ಅಥವಾ ಇತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಕೊಠಡಿಯೊಳಗೆ ತರುವುದನ್ನು ನಿಷೇಧಿಸಲಾಗಿದೆ.
9. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಘಂಟೆ ಬಾರಿಸಿದ ತಕ್ಷಣವೇ ಉತ್ತರ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು. ಸಂವೀಕ್ಷಕರ ವಶಕ್ಕೆ ನಿಮ್ಮ ಉತ್ತರ ಹಾಳೆಯನ್ನು ನೀಡಿದ ನಂತರ ಹಾಗೂ ಸಂವೀಕ್ಷಕರು ನಿಮಗೆ ಹೊರಗೆ ಹೋಗಲು ಅನುಮತಿ ನೀಡಿದ ನಂತರ ನೀವು ಪರೀಕ್ಷಾ ಕೊಠಡಿಯಿಂದ ಹೊರ ಹೋಗಬಹುದು.

***Note :*** *English version of the instructions is printed on the back cover of this booklet.*

SEAL

www.InyaTrust.com

www.InyaTrust.com

1. ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯವು ಈ ಕೆಳಗಿನ ಯಾವುದನ್ನು ಒಳಗೊಂಡಿಲ್ಲ?
   (1) ಸಾಯುವ ಹಕ್ಕು
   (2) ಜೀವನೋಪಾಯದ ಹಕ್ಕು
   (3) ಖಾಸಗೀ ಬದುಕಿನ ಹಕ್ಕು
   (4) ಮಾನವೀಯ ಗೌರವದಿಂದ ಬದುಕುವ ಹಕ್ಕು

2. ಸಾಮಾನ್ಯವಾದ ಕಾನೂನಿನಡಿಯಲ್ಲಿಯ ಅಪರಾಧಕ್ಕಾಗಿ ಬಂಧಿತನಾದ ವ್ಯಕ್ತಿಗೆ ಈ ಕೆಳಗೆ ನಮೂದಿಸಿದ ಯಾವ ಅವಧಿಯ ಒಳಗಾಗಿ ದಂಡಾಧಿಕಾರಿ ಅಥವಾ ಮ್ಯಾಜಿಸ್ಟ್ರೇಟರ ಎದುರು ಹಾಜರುಪಡಿಸಿಕೊಳ್ಳುವ ಹಕ್ಕು ಇದೆ ?
   (1) 7 ದಿನಗಳ ಒಳಗಾಗಿ
   (2) 14 ದಿನಗಳ ಒಳಗಾಗಿ
   (3) 24 ಗಂಟೆಗಳ ಒಳಗಾಗಿ
   (4) 30 ದಿನಗಳ ಒಳಗಾಗಿ

3. ಭಾರತ ಸಂವಿಧಾನದ 23ನೇ ಅನುಚ್ಛೇದವು ಈ ಕೆಳಗಿನ ಯಾವುದನ್ನು ಪ್ರತಿಬಂಧಿಸುವುದಿಲ್ಲ ?
   (1) ಸಾರ್ವಜನಿಕ ಉದ್ದೇಶದ ಕಡ್ಡಾಯ ಸೇವೆ
   (2) ಸಂಭಾವನೆ ನೀಡದ ದುಡಿಮೆ
   (3) ಬಲವಂತದ ದುಡಿಮೆ
   (4) ಜೀತಪದ್ಧತಿ

4. ಅನುಚ್ಛೇದ 25ರ ಅಡಿಯಲ್ಲಿ ಹೇಳಿದ ಧಾರ್ಮಿಕ ಹಕ್ಕು ಈ ಕೆಳಗಿನ ಯಾವುದನ್ನು ಒಳಗೊಂಡಿಲ್ಲ ?
   (1) ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಬಲವಂತದ ಮತಾಂತರ ಮಾಡುವುದು
   (2) ಧರ್ಮವನ್ನು ಆಚರಿಸುವ
   (3) ಧರ್ಮವನ್ನು ಪ್ರಚುರ ಪಡಿಸುವುದು
   (4) ಧರ್ಮವನ್ನು ಅನುಸರಿಸು

5. ಸುಗ್ರೀವಾಜ್ಞೆಯನ್ನು ಹೊರಡಿಸುವ ಅಧಿಕಾರವು ಈ ಕೆಳಗಿನ ಯಾರಲ್ಲಿ ನಿಹಿತವಾಗಿಲ್ಲ ?
   (1) ಭಾರತದ ರಾಷ್ಟ್ರಪತಿ
   (2) ರಾಜ್ಯಪಾಲರು
   (3) ಭಾರತದ ಮುಖ್ಯ ನ್ಯಾಯಮೂರ್ತಿಗಳು
   (4) ಈ ಮೇಲಿನದು ಯಾವುದೂ ಅಲ್ಲ

... ಕೆಳಹಂತದ ನ್ಯಾಯಾಲಯವು ತನಗೆ ...ಕಾರವ್ಯಾಪ್ತಿ ಇಲ್ಲದ ವಿಷಯದ ಮೇಲಿನ ...ಚಾರಣೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಉಪಕ್ರಮಿಸಿದಾಗ ನೊಂದ ವ್ಯಕ್ತಿಯು ಈ ಕೆಳಗಿನ ಪೈಕಿ ಯಾವ ಆದೇಶವನ್ನು ಪಡೆಯಲು ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಬಹುದು ?
   (1) ರಿಟ್ ಆಫ್ ಪ್ರಾಹಿಬಿಷನ್
   (2) ಮೇಂಡೆಮಸ್
   (3) ರಿಟ್ ಆಫ್ ಕ್ವೋ-ವಾರಂಟೋ
   (4) ರಿಟ್ ಆಫ್ ಹೇಬಿಯಸ್ ಕಾರ್ಪಸ್

7. ಜಿಲ್ಲಾ ನ್ಯಾಯಾಧೀಶರುಗಳ ನೇಮಕ, ಪದಹಂಚಿಕೆ ಮತ್ತು ಪದೋನ್ನತಿಯನ್ನು ಈ ಕೆಳಗಿನವರಲ್ಲಿ ಯಾರು ಮಾಡುತ್ತಾರೆ ?
   (1) ರಾಷ್ಟ್ರಪತಿ
   (2) ರಾಜ್ಯಪಾಲರು
   (3) ಪ್ರಧಾನಮಂತ್ರಿ
   (4) ಮುಖ್ಯಮಂತ್ರಿ

8. ಭಾರತ ಸಂವಿಧಾನದ ಈ ಕೆಳಗಿನ ಯಾವ ಅನುಚ್ಛೇದವು ಕೇಂದ್ರ ಮತ್ತು ರಾಜ್ಯಗಳಿಗೆ ಸಾಮಾನ್ಯವಾದ ಹೊಸ "ಅಖಿಲ ಭಾರತ ಸೇವೆಗಳನ್ನು" ಕಲ್ಪಿಸಲು ಸಂಸತ್ತಿಗೆ ಅಧಿಕಾರ ನೀಡುತ್ತದೆ ?
   (1) ಅನುಚ್ಛೇದ 300
   (2) ಅನುಚ್ಛೇದ 312
   (3) ಅನುಚ್ಛೇದ 320
   (4) ಅನುಚ್ಛೇದ 322

9. ಅನುಚ್ಛೇದ 13 ರ ಪ್ರಕಾರ ನ್ಯಾಯಾಂಗ ಪರಾಮರ್ಶೆ (ಪುನರೀಕ್ಷಣೆ) ಎಂದರೆ
   (1) ಕಾನೂನುಗಳ ಸಂವಿಧಾನಿಕ ಸಿಂಧುತ್ವವನ್ನು ಪರಾಮರ್ಶೆ ಮಾಡುವುದು
   (2) ರಾಜ್ಯ ಉಚ್ಚ ನ್ಯಾಯಾಲಯವು ತನ್ನದೇ ತೀರ್ಪಿನ ಪರಾಮರ್ಶೆ ಮಾಡುವುದು
   (3) ಬೇರೆ ನ್ಯಾಯಾಲಯಗಳ ತೀರ್ಪನ್ನು ಪರಾಮರ್ಶೆ ಮಾಡುವುದು
   (4) ಸರ್ವೋಚ್ಚ ನ್ಯಾಯಾಲಯವು ತನ್ನದೇ ಆದ ತೀರ್ಪನ್ನು ಪರಾಮರ್ಶೆ ಮಾಡುವುದು

10. ಈ ಕೆಳಗಿನವುಗಳಲ್ಲಿ ಅನುಚ್ಛೇದ 12ರ ಪ್ರಕಾರ ಯಾವುದು ರಾಜ್ಯವಲ್ಲ ?
   (1) ವ್ಯಕ್ತಿ
   (2) ಸ್ಥಳೀಯ ಪ್ರಾಧಿಕಾರಗಳು
   (3) ರಾಜ್ಯ ಸರಕಾರ
   (4) ಪ್ರಾಧಿಕಾರಗಳು



www.InyaTrust.com

www.InyaTrust.com

1. Right of personal liberty does not include
   (1) Right to die
   (2) Right to livelihood
   (3) Right to privacy
   (4) Right to live with human dignity

2. A person who is arrested for any offence under an ordinary law has the right to be produced before a Magistrate
   (1) Within 7 days
   (2) Within 14 days
   (3) Within 24 hours
   (4) Within 30 days

3. The Article 23 of the Constitution of India does not prohibit the following
   (1) Compulsory service for public purpose
   (2) Begar
   (3) Forced Labour
   (4) Bonded Labour

4. Freedom of religion under Article 25 does not include the following
   (1) Forced conversion from one religion to another
   (2) Freedom to practice
   (3) Freedom to propagate religion
   (4) Freedom to profess

5. The ordinance making power is not vested in
   (1) The President of India
   (2) The Governor
   (3) Chief Justice of India
   (4) None of the above

6. When an inferior Court takes up for hearing a matter over which it has no jurisdiction, the aggrieved person can move the Supreme Court for
   (1) Writ of prohibition
   (2) Mandamus
   (3) Writ of quo-warranto
   (4) Writ of Habeas Corpus

7. The appointment, posting and promotion of District Judges will be made by
   (1) The President
   (2) The Governor
   (3) The Prime Minister
   (4) The Chief Minister

8. The following Article of Constitution of India empowers the Parliament to create new All India Services common to the Union and States
   (1) Article 300 (2) Article 312
   (3) Article 320 (4) Article 322

9. The Judicial review under Article 13 means
   (1) Review of the constitutionality of legislation
   (2) Review of its own Judgement by the High Court
   (3) Review of the Judgement of other Courts
   (4) Review of its own Judgement by the Supreme Court

10. Under Article 12, which of the following is not a 'State' ?
   (1) Individual
   (2) Local Authorities
   (3) State Government
   (4) Authorities



www.InyaTrust.com

www.InyaTrust.com

11. ವಿಧಾನಪರಿಷತ್ತಿನ ಈ ಕೆಳಗೆ ಕಾಣಿಸಿದ ಯಾವ ಪ್ರಮಾಣದ ಸದಸ್ಯರನ್ನು ರಾಜ್ಯಪಾಲರು ನಾಮನಿರ್ದೇಶನ ಮಾಡುತ್ತಾರೆ ?
(1) 1/9 (2) 1/6
(3) 1/10 (4) 1/12

12. ಸಂವಿಧಾನದ ಅನುಚ್ಛೇದ 164ರ ಅನುಸಾರ ಈ ಕೆಳಗೆ ನಮೂದಿಸಿದ ಯಾರ ಇಷ್ಟಪರ್ಯಂತ ಮಂತ್ರಿಗಳು ಅಧಿಕಾರದಲ್ಲಿ ಇರುತ್ತಾರೆ ?
(1) ರಾಷ್ಟ್ರಪತಿ
(2) ಪ್ರಧಾನಮಂತ್ರಿ
(3) ಆಯಾ ರಾಜ್ಯದ ರಾಜ್ಯಪಾಲ
(4) ಮುಖ್ಯಮಂತ್ರಿ

13. ಒಂದು ರಾಜ್ಯದ ವಿಧಾನಪರಿಷತ್ತಿನ ಒಟ್ಟು ಸದಸ್ಯರ ಸಂಖ್ಯೆಯು ಈ ಕೆಳಗಿನ ಯಾವುದನ್ನು ಮೀರಬಾರದು ?
(1) ರಾಜ್ಯದ ವಿಧಾನಸಭೆಯ ಒಟ್ಟು ಸದಸ್ಯತ್ವದ ಅರ್ಧದಷ್ಟು
(2) ರಾಜ್ಯದ ವಿಧಾನಸಭೆಯ ಒಟ್ಟು ಸದಸ್ಯತ್ವದ $^{3}/_{4}$ರಷ್ಟು
(3) ರಾಜ್ಯದ ವಿಧಾನಸಭೆಯ ಒಟ್ಟು ಸದಸ್ಯತ್ವದ $^{2}/_{3}$ರಷ್ಟು
(4) ರಾಜ್ಯದ ವಿಧಾನಸಭೆಯ ಒಟ್ಟು ಸದಸ್ಯತ್ವದ $^{1}/_{3}$ರಷ್ಟು

14. ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಯ ನಿವೃತ್ತಿ ವಯಸ್ಸು
(1) 62 ವರ್ಷ (2) 60 ವರ್ಷ
(3) 65 ವರ್ಷ (4) 68 ವರ್ಷ

15. ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿದೆ ?
(1) ಉಪರಾಷ್ಟ್ರಪತಿಯು ರಾಜ್ಯದ ವಿಧಾನ ಪರಿಷತ್ತಿನ ಪದನಿಮಿತ್ತ ಸಭಾಪತಿಯಾಗಿರುತ್ತಾರೆ
(2) ರಾಜ್ಯಪಾಲರು ರಾಜ್ಯದ ವಿಧಾನ ಪರಿಷತ್ತಿನ ಪದನಿಮಿತ್ತ ಸಭಾಪತಿಯಾಗಿರುತ್ತಾರೆ
(3) ರಾಜ್ಯದ ವಿಧಾನಸಭೆಯ ಉಪಾಧ್ಯಕ್ಷರು ಆಯಾ ವಿಧಾನ ಪರಿಷತ್ತಿನ ಪದನಿಮಿತ್ತ ಸಭಾಪತಿಯಾಗಿರುತ್ತಾರೆ
(4) ರಾಜ್ಯದ ವಿಧಾನಪರಿಷತ್ತಿನ ಸದಸ್ಯರು ತಮ್ಮ ಪೈಕಿ ಒಬ್ಬರನ್ನು ವಿಧಾನಪರಿಷತ್ತಿನ ಸಭಾಪತಿಯೆಂದು ಆಯ್ಕೆ ಮಾಡುತ್ತಾರೆ

16. ಅನುಚ್ಛೇದ 215ರ ಪ್ರಕಾರ ಈ ಕೆಳಗಿನ ಯಾವ ನ್ಯಾಯಾಲಯವನ್ನು ಕೋರ್ಟ್ ಆಫ್ ರೆಕಾರ್ಡ್ ಎಂದು ಘೋಷಿಸಲಾಗಿದೆ ?
(1) ಜಿಲ್ಲಾ ನ್ಯಾಯಾಲಯ
(2) ಜೆ.ಎಂ.ಎಫ್.ಸಿ. ನ್ಯಾಯಾಲಯ
(3) ಅಧೀನ ನ್ಯಾಯಾಲಯಗಳ ಪೈಕಿ ಯಾವುದೇ ಒಂದು ನ್ಯಾಯಾಲಯ
(4) ಉಚ್ಚ ನ್ಯಾಯಾಲಯ

17. ಈ ಕೆಳಗಿನ ಪೈಕಿ ಯಾವ ಅನುಚ್ಛೇದವು ರಾಜ್ಯಗಳ ಮಧ್ಯದ ನದಿಗಳು ಮತ್ತು ನದಿಕೊಳ್ಳಗಳ ನೀರಿನ ಉಪಯೋಗ, ಹಂಚಿಕೆ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದ ವಿವಾದ ಅಥವಾ ದೂರುಗಳನ್ನು ಕಾನೂನಿನ ಅನುಸಾರ ತೀರ್ಮಾನಿಸಲು ಸಂಸತ್ತಿಗೆ ಅಧಿಕಾರವನ್ನು ನೀಡುತ್ತದೆ ?
(1) ಅನುಚ್ಛೇದ 260
(2) ಅನುಚ್ಛೇದ 262
(3) ಅನುಚ್ಛೇದ 263
(4) ಅನುಚ್ಛೇದ 264

18. ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ ?
(1) ಸರಕಾರದ ಸೇವಕರು ಸಾರ್ವಭೌಮ ಅಧಿಕಾರದ ಕಾರ್ಯ ಮಾಡುವಾಗ ಎಸಗಿದ ಅಪಕೃತ್ಯ (ಟಾರ್ಶಿಯಸ್ ಆ್ಯಕ್ಟ್)ಗಳಿಗೆ ಮಾತ್ರ ಸರಕಾರ ಜವಾಬ್ದಾರಿಯಾಗಿರುತ್ತದೆ
(2) ಸರಕಾರದ ಸೇವಕರು ಸಾರ್ವಭೌಮ ಅಧಿಕಾರವಲ್ಲದ ಕಾರ್ಯಗಳನ್ನು ಮಾಡುವಾಗ ಎಸಗಿದ ಅಪಕೃತ್ಯ (ಟಾರ್ಶಿಯಸ್ ಆ್ಯಕ್ಟ್)ಗಳಿಗೆ ಮಾತ್ರ ಸರಕಾರ ಜವಾಬ್ದಾರವಾಗಿರುತ್ತದೆ
(3) ಸರಕಾರದ ಸೇವಕರು ಎಸಗಿದ ಅಪಕೃತ್ಯ (ಟಾರ್ಶಿಯಸ್ ಆ್ಯಕ್ಟ್)ಗಳಿಗೆ ಅವು ಸಾರ್ವಭೌಮ ಅಧಿಕಾರದ ಕಾರ್ಯವಾಗಿರಲಿ ಅಥವಾ ಇಲ್ಲದಿರಲಿ ಸರಕಾರವು ಜವಾಬ್ದಾರವಾಗಿರುತ್ತದೆ
(4) ಮೇಲಿನದು ಯಾವುದೂ ಸರಿಯಲ್ಲ



www.InyaTrust.com

www.InyaTrust.com

11. The Governor nominates the following proportion of the members of the Legislative Council
(1) 1/9 (2) 1/6
(3) 1/10 (4) 1/12

12. The Minister under Article 164 shall hold the office during the pleasure of the
(1) President of India
(2) Prime Minister
(3) Governor of the State
(4) Chief Minister

13. The total number of members in the Legislative Council of a State shall not exceed the following
(1) 1/2 of the total number of members in the Legislative Assembly of that State
(2) $3/4^{th}$ of the total number of members in the Legislative Assembly of that State
(3) $2/3^{rd}$ of the total number of members in the Legislative Assembly of that State
(4) $1/3^{rd}$ of the total number of members in the Legislative Assembly of that State

14. A Judge of a High Court shall hold office until he attains the age of
(1) 62 years (2) 60 years
(3) 65 years (4) 68 years

15. Which of the following statement is correct ?
(1) Vice-President is the ex-officio Chairman of the Legislative Council of the State
(2) Governor of the State is the ex-officio Chairman of the Legislative Council of the State
(3) Deputy Speaker is the ex-officio Chairman of Legislative Council of the State
(4) Legislative Council of each State elects its Chairman from among its one member

16. Article 215 declares which of the following as a Court of Record ?
(1) A District Court
(2) Court of J.M.F.C.
(3) Any Court in the sub-ordinate judiciary
(4) High Court

17. Which of the following Provisions authorise the Parliament to provide by law for adjudication of any dispute or complaint with respect to the use, distribution or control of the waters of any interstate rivers and river valleys ?
(1) Article 260
(2) Article 262
(3) Article 263
(4) Article 264

18. Which of the following statements is correct ?
(1) The State is liable for tortious acts of its officers if they are done during the course of doing sovereign functions only
(2) The State is liable for tortious acts if they are done during the course of doing non-sovereign functions only
(3) The State is liable for tortious acts irrespective of sovereign and non-sovereign acts
(4) None of the above



www.InyaTrust.com

www.InyaTrust.com

19. ಈ ಕೆಳಗಿನವುಗಳಲ್ಲಿ ಯಾವುದು ಸರಿಯಲ್ಲ?

(1) ರಾಜ್ಯ ಸರ್ಕಾರದ ಸಿವಿಲ್ ಹುದ್ದೆಯಲ್ಲಿ ನೇಮಕಾತಿ ಹೊಂದಿದ ವ್ಯಕ್ತಿಯನ್ನು ಆತನನ್ನು ನಿಯುಕ್ತಿ ಮಾಡಿದ ಪ್ರಾಧಿಕಾರಕ್ಕೆ ಅಧೀನವಾದ ಯಾವುದೇ ಪ್ರಾಧಿಕಾರಿಯು ತೆಗೆದು ಹಾಕಲು ಬರಲಾರದು

(2) ರಾಜ್ಯ ಸರಕಾರದ ಸಿವಿಲ್ ಹುದ್ದೆಯಲ್ಲಿ ನೇಮಕಾತಿ ಹೊಂದಿದ ವ್ಯಕ್ತಿಯನ್ನು ಆತನಿಗೆ ನಿಯುಕ್ತಿ ಮಾಡಿದ ಪ್ರಾಧಿಕಾರಿಯೇ ತೆಗೆದು ಹಾಕಬೇಕು ಅಥವಾ ವಜಾ ಮಾಡಬೇಕು

(3) ರಾಜ್ಯ ಸರಕಾರದ ಸಿವಿಲ್ ಹುದ್ದೆಯಲ್ಲಿ ನಿಯುಕ್ತಿಗೊಂಡ ವ್ಯಕ್ತಿಯನ್ನು ವಜಾ ಮಾಡುವ ಅಥವಾ ಕೆಳದರ್ಜೆಗಿಳಿಸುವ ಮೊದಲು ಆತನಿಗೆ ತನ್ನನ್ನು ತಾನು ಸಮರ್ಥಿಸಿಕೊಳ್ಳುವ ಅವಕಾಶವನ್ನು ನೀಡಬೇಕು

(4) ರಾಜ್ಯ ಸರಕಾರದ ಸಿವಿಲ್ ಹುದ್ದೆಯಲ್ಲಿ ನಿಯುಕ್ತಿ ಹೊಂದಿದ ವ್ಯಕ್ತಿಯನ್ನು ಆತನನ್ನು ನೇಮಕ ಮಾಡಿದ ಪ್ರಾಧಿಕಾರ ಅಥವಾ ಸಮಾನಾಂತರ ಹುದ್ದೆಯ ಪ್ರಾಧಿಕಾರಿ ವಜಾಮಾಡಬಹುದು

20. ರಾಜ್ಯ ಲೋಕಸೇವಾ ಆಯೋಗದ ಸದಸ್ಯರನ್ನು ಈ ಕೆಳಗಿನವರಲ್ಲಿ ಯಾರು ನೇಮಕ ಮಾಡುತ್ತಾರೆ?

(1) ರಾಷ್ಟ್ರಪತಿ

(2) ರಾಜ್ಯಪಾಲ

(3) ಮುಖ್ಯಮಂತ್ರಿ

(4) ಮೇಲಿನವರಲ್ಲಿ ಯಾರೂ ಅಲ್ಲ

21. ಈ ಕೆಳಗಿನ ಯಾರನ್ನು ಪದಚ್ಯುತಿಗೊಳಿಸಲು ವಾಗ್ದಂಡನೆ ಪ್ರಕ್ರಿಯೆ (ಇಂಪೀಚ್‌ಮೆಂಟ್) ಯನ್ನು ಅನುಸರಿಸಲಾಗುತ್ತದೆ?

(1) ರಾಜ್ಯಪಾಲ

(2) ಉಚ್ಚನ್ಯಾಯಾಲಯದ ನ್ಯಾಯಮೂರ್ತಿ

(3) ಮುಖ್ಯಮಂತ್ರಿ

(4) ಜಿಲ್ಲಾ ನ್ಯಾಯಾಧೀಶ

22. ರಾಜ್ಯವು ಮಾಡಿದ ಕಾನೂನು ಮತ್ತು ಕೇಂದ್ರವು ಮಾಡಿದ ಕಾನೂನಿನ ಮಧ್ಯೆ ವೈರುಧ್ಯ ಉಂಟಾದಾಗ

(1) ಕೇಂದ್ರವು ಮಾಡಿದ ಕಾನೂನು ಪೂರ್ಣ ಪ್ರಮಾಣದಲ್ಲಿ ಶೂನ್ಯ ಅಥವಾ ಅಸಿಂಧುವಾಗುತ್ತದೆ

(2) ಕೇಂದ್ರವು ಮಾಡಿದ ಕಾನೂನಿನಲ್ಲಿ ವೈರುಧ್ಯವಿದ್ದ ಭಾಗವು ಮಾತ್ರ ಶೂನ್ಯವಾಗುತ್ತದೆ ಅಥವಾ ಅಸಿಂಧುವಾಗುತ್ತದೆ

(3) ರಾಜ್ಯವು ಮಾಡಿದ ಕಾನೂನು ಪೂರ್ಣವಾಗಿ ಅಸಿಂಧುವಾಗುತ್ತದೆ

(4) ರಾಜ್ಯವು ಮಾಡಿದ ಕಾನೂನಿನಲ್ಲಿಯ ವೈರುಧ್ಯವಿರುವ ಭಾಗವಷ್ಟೇ ಅಸಿಂಧುವಾಗುತ್ತದೆ

23. ಸಂವಿಧಾನದ ಅನುಚ್ಛೇದ 299ರ ಪ್ರಕಾರ ಈ ಕೆಳಗಿನ ಯಾವ ಸಂದರ್ಭದಲ್ಲಿ ಮಾಡಿಕೊಂಡ ಒಡಂಬಡಿಕೆಯು ಭಾರತ ಸರಕಾರಕ್ಕೆ ಬಂಧನಕಾರಕವಾಗುವುದಿಲ್ಲ?

(1) ಒಡಂಬಡಿಕೆಯನ್ನು ಸಂದರ್ಭಾನುಸಾರ ರಾಷ್ಟ್ರಪತಿಯಿಂದ ಅಥವಾ ರಾಜ್ಯಪಾಲರಿಂದ ಮಾಡಲಾದಂತೆ ವ್ಯಕ್ತಪಡಿಸಿದಾಗ

(2) ಒಡಂಬಡಿಕೆಯನ್ನು ಸಂದರ್ಭಾನುಸಾರ ರಾಷ್ಟ್ರಪತಿ ಅಥವಾ ರಾಜ್ಯಪಾಲರ ಪರವಾಗಿ ಕಾರ್ಯಗತಗೊಳಿಸಿದಾಗ

(3) ಒಡಂಬಡಿಕೆಯನ್ನು ಸಂದರ್ಭಾನುಸಾರ ರಾಷ್ಟ್ರಪತಿ ಅಥವಾ ರಾಜ್ಯಪಾಲರಿಂದ ನಿರ್ದೇಶಿತನಾದ ವ್ಯಕ್ತಿಯಿಂದ ಕಾರ್ಯಗತಗೊಳಿಸಿದಾಗ

(4) ಒಡಂಬಡಿಕೆಯನ್ನು ಸಂದರ್ಭಾನುಸಾರ ಪ್ರಧಾನಮಂತ್ರಿ ಅಥವಾ ಮುಖ್ಯಮಂತ್ರಿಯಿಂದ ಮಾಡಲಾದಂತೆ ವ್ಯಕ್ತಪಡಿಸಿದಾಗ

24. ಮುಖ್ಯ ಚುನಾವಣಾ ಆಯುಕ್ತರನ್ನು ಈ ಕೆಳಗಿನವರಲ್ಲಿ ಯಾರು ನೇಮಕ ಮಾಡುತ್ತಾರೆ?

(1) ಸಂಸತ್ತು

(2) ರಾಷ್ಟ್ರಪತಿ

(3) ಭಾರತದ ಮುಖ್ಯ ನ್ಯಾಯಮೂರ್ತಿಗಳು

(4) ಪ್ರಧಾನಮಂತ್ರಿ



www.InyaTrust.com

www.InyaTrust.com

19. Which of the following statements is not correct ?
    (1) A civil servant of a State cannot be dismissed by any authority subordinate to the authority by which he was appointed
    (2) A civil servant of a State must be removed or dismissed by the same authority who made the appointment
    (3) A civil servant of a State must be given reasonable opportunity to defend before he is removed or reduced in rank
    (4) A civil servant of a State may be removed by the same authority or co-ordinate rank of the appointing authority

20. The members of the State Public Service Commission are appointed by
    (1) President
    (2) Governor
    (3) Chief Minister
    (4) None of the above

21. Procedure called 'impeachment' is prescribed for the removal of which of the following ?
    (1) Governor of a State
    (2) Judge of High Court
    (3) Chief Minister
    (4) District Judge

22. In case of repugnancy between the State law and the Central law
    (1) Central law becomes void in its entirety
    (2) Central law becomes void to the extent of repugnancy
    (3) State law becomes void in its entirety
    (4) State law becomes void only to the extent of repugnancy

23. As per Article 299, a contract is not binding on the Government of India in which of the following circumstances ?
    (1) If it is expressed to be made by the President or Governor as the case may be
    (2) If it is extended on behalf of the President or the Governor as the case may be
    (3) If its execution is made by such person in such a manner as the President or Governor directs of authorises
    (4) If it is expressed to be made by the Prime Minister or the Chief Minister as the case may be

24. The Chief Election Commissioner is appointed by
    (1) Parliament
    (2) President
    (3) Chief Justice of India
    (4) The Prime Minister



www.InyaTrust.com

www.InyaTrust.com

25. ಚುನಾವಣಾ ಆಯೋಗದ ಕಾರ್ಯಗಳಲ್ಲಿ ಈ ಕೆಳಗಿನ ಪೈಕಿ ಯಾವುದು ಸೇರಿಲ್ಲ?
   (1) ಸಂಸತ್ತಿಗೆ ಚುನಾವಣೆಯನ್ನು ನಡೆಸುವುದು
   (2) ರಾಜ್ಯದ ವಿಧಾನಸಭೆಗೆ ಚುನಾವಣೆ ನಡೆಸುವುದು
   (3) ರಾಷ್ಟ್ರಪತಿ ಹುದ್ದೆಗೆ ಚುನಾವಣೆ ನಡೆಸುವುದು
   (4) ರಾಜ್ಯ ಸಭೆಯ ಸದಸ್ಯರನ್ನು ನಾಮನಿರ್ದೇಶನ ಮಾಡುವುದು

26. ರಾಜ್ಯ ವಿಧಾನಸಭಾ ಚುನಾವಣೆಯನ್ನು ಈ ಕೆಳಗಿನ ಯಾವುದನ್ನು ಆಧರಿಸಿ ನಡೆಸಲಾಗುತ್ತದೆ ?
   (1) ಸಾಕ್ಷರತೆ
   (2) ಸಾಮಾಜಿಕ ಹಿನ್ನೆಲೆ
   (3) ಜಾತಿ, ಕುಲ ಮತ್ತು ಲಿಂಗ
   (4) ವಯಸ್ಕ ಮತದಾನ

27. ಈ ಕೆಳಗಿನವುಗಳಲ್ಲಿ ಯಾವುದು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ ?
   (1) ಕೇವಲ ಜನ್ಮಸ್ಥಳವನ್ನು ಆಧರಿಸಿ ನಾಗರಿಕರ ಮಧ್ಯೆ ಅಸಮಾನತೆಯನ್ನು ತೋರಿಸುವುದು
   (2) ಮಹಿಳೆ ಮತ್ತು ಮಕ್ಕಳಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸುವುದು
   (3) ಶೈಕ್ಷಣಿಕ ಆಧಾರದ ಮೇಲಿನ ವಿಂಗಡಣೆ
   (4) ಸಮಾನ ಕೆಲಸಕ್ಕೆ ಸಮಾನ ಸಂಬಳ

28. ಈ ಕೆಳಗಿನವುಗಳಲ್ಲಿ ಯಾವುದು ತಪ್ಪು ?
   (1) ರಾಷ್ಟ್ರಪತಿಯ ಅನುಮತಿ ಇಲ್ಲದೇ ಭಾರತದ ಯಾವುದೇ ನಾಗರಿಕನು ಪರರಾಷ್ಟ್ರವು ನೀಡುವ ಬಿರುದನ್ನು ಸ್ವೀಕರಿಸುವಂತಿಲ್ಲ
   (2) ಈ ದೇಶದ ಯಾವುದೇ ಲಾಭದಾಯಕ ಅಥವಾ ವಿಶ್ವಸ್ಥಹುದ್ದೆಯನ್ನು ಅಲಂಕರಿಸಿದ ವಿದೇಶೀಯನು ರಾಷ್ಟ್ರಪತಿಯ ಅನುಮತಿ ಇಲ್ಲದೇ ಬೇರೆ ಯಾವುದೇ ರಾಷ್ಟ್ರದಿಂದ ಕೊಡಮಾಡುವ ಬಿರುದನ್ನು ಸ್ವೀಕರಿಸುವಂತಿಲ್ಲ
   (3) ರಾಜ್ಯದ ಯಾವುದೇ ವಿಶ್ವಾಸಿಕ ಹುದ್ದೆಯನ್ನು ಹೊಂದಿದ ವ್ಯಕ್ತಿಯು ರಾಷ್ಟ್ರಪತಿಯ ಅನುಮತಿ ಇಲ್ಲದೇ ಯಾವುದೇ ವಿದೇಶೀಯ ಹುದ್ದೆಯನ್ನು ಸ್ವೀಕರಿಸಕೂಡದು
   (4) ವಿಶೇಷ ಸೇವೆಗೆ ಕೊಡಮಾಡುವ ಪದ್ಮವಿಭೂಷಣ ಬಿರುದನ್ನು ಭಾರತದ ಯಾವುದೇ ನಾಗರಿಕನು ಸ್ವೀಕರಿಸುವಂತಿಲ್ಲ

29. ಉದ್ಯೋಗ, ವೃತ್ತಿ, ವ್ಯಾಪಾರ ಮತ್ತು ವ್ಯವಹಾರದ ಸ್ವಾತಂತ್ರ್ಯವನ್ನು ಈ ಕೆಳಗಿನ ಯಾವ ಕಾರಣಕ್ಕಾಗಿ ನಿಯಂತ್ರಿಸುವಂತಿಲ್ಲ ?
   (1) ಸಾರ್ವಜನಿಕ ಹಿತಾಸಕ್ತಿಯ ಕಾರಣಕ್ಕಾಗಿ ನಿಯಂತ್ರಣ
   (2) ಔದ್ಯೋಗಿಕ ಅಥವಾ ತಾಂತ್ರಿಕ ಅರ್ಹತೆಯನ್ನು ವಿಧಿಸುವ ನಿಯಂತ್ರಣ
   (3) ನಾಗರಿಕರನ್ನು ಅಂಶಿಕವಾಗಿ ಅಥವಾ ಪೂರ್ಣವಾಗಿ ಹೊರಗಿಟ್ಟು ಸರಕಾರ ಕೇವಲ ತನ್ನ ಮಟ್ಟಿಗೆ ಮಾತ್ರ ಉದ್ಯೋಗ ಅಥವಾ ವ್ಯಾಪಾರವನ್ನು ಸೀಮಿತಗೊಳಿಸುವ ಉದ್ದೇಶಕ್ಕಾಗಿ ನಿಯಂತ್ರಣ
   (4) ಮೇಲಿನದು ಯಾವುದೂ ಅಲ್ಲ

30. ಸಂವಿಧಾನದ ಅನುಚ್ಛೇದ 20ರ ಪ್ರಕಾರ ಅಪರಾಧ ಪೂರ್ವ ಕಾನೂನು (ಎಕ್ಸ್ ಪೋಸ್ಟ್ ಫ್ಯಾಕ್ಟೋ ಲಾ) ಈ ಕೆಳಗಿನದನ್ನು ಪ್ರತಿಬಂಧಿಸುತ್ತದೆ
   (1) ಇನ್ನು ಮುಂದೆ ಅನ್ವಯವಾಗುವಂತೆ ಕಾನೂನನ್ನು ರಚಿಸುವುದು
   (2) ಪೂರ್ವಾನ್ವಯವಾಗುವಂತೆ ಕಾನೂನನ್ನು ರಚಿಸುವುದು
   (3) ಪೂರ್ವಾನ್ವಯವಾಗುವಂತೆ ದಂಡ ಸಂಹಿತೆಯನ್ನು ರಚಿಸುವುದು
   (4) ಮೇಲಿನ ಎಲ್ಲವೂ

31. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವು ಈ ಕೆಳಗಿನವುಗಳಲ್ಲಿ ಯಾವುದನ್ನು ಒಳಗೊಂಡಿಲ್ಲ ?
   (1) ತನಗಿರುವ ನಂಬಿಕೆ ಮತ್ತು ಮಾಹಿತಿಗಳನ್ನು ಮುಕ್ತವಾಗಿ ಮಾತುಗಳಿಂದ, ಲೇಖನದ ಮೂಲಕ, ಮುದ್ರಣದ ಮೂಲಕ, ಚಿತ್ರಗಳು ಅಥವಾ ಇನ್ನಾವುದೇ ರೀತಿಯಲ್ಲಿ ಅಭಿವ್ಯಕ್ತಿ ಪಡಿಸುವ ಹಕ್ಕು
   (2) ಮುದ್ರಣ ಸ್ವಾತಂತ್ರ್ಯ
   (3) ಮಾನಹಾನಿಕಾರಕ, ಲಜ್ಜಾಸ್ಪದ ವಿಷಯಗಳನ್ನು ಪ್ರದರ್ಶಿಸುವುದು
   (4) ತಮ್ಮ ವಿಚಾರಗಳನ್ನು ಪ್ರಚುರಪಡಿಸುವ ಸ್ವಾತಂತ್ರ್ಯ ಮತ್ತು ಪರಿಚಲನೆ ಮಾಡುವ ಸ್ವಾತಂತ್ರ್ಯ



www.InyaTrust.com

www.InyaTrust.com

25. The functions of the Election Commission do not include which of the following ?
(1) Conducting the elections to the Parliament
(2) Conducting the elections to the State Legislature
(3) Conducting the elections to the office of President
(4) Making nominations of the members to the Rajyasabha

26. The election to the State Legislature is conducted on the basis of
(1) Literacy
(2) Social background
(3) Caste, creed and sex
(4) Adult suffrage

27. Which of the following is the violation of the Fundamental rights ?
(1) Discrimination between citizens only on the ground of place of birth
(2) Special provisions for women and children
(3) Classification on the basis of education
(4) Equal pay for equal work

28. Which of the following is not correct ?
(1) A citizen of India is prohibited from accepting any title from any foreign State without the consent of the President
(2) A foreigner holding any office of profit or trust under the State cannot accept any title from any foreign State without the consent of the President
(3) No person holding any office of trust under the State shall accept, without the consent of the President, office of any kind from any foreign State
(4) No citizen of India can accept the title Padma Vibhushan for distinguished services

29. Freedom of profession, occupation, trade or business cannot be restricted on which of the following grounds ?
(1) Restriction on the ground of public interest
(2) Restriction prescribing professional or technical qualification
(3) Restriction enabling the State to carry on any trade or business to the exclusion of citizens wholly or partially
(4) None of the above

30. The Ex post facto law under Article 20 prohibits which of the following ?
(1) Making of law prospective
(2) Making of a law retrospective
(3) Making of a retrospective criminal law
(4) All the above

31. The freedom of speech and expression does not include one of the following
(1) Right to express one's own convictions and information freely by words of mouth, writing, printing, pictures or any other mode
(2) Freedom of press
(3) Freedom to exhibit defamatory, scandalous articles
(4) Freedom of propagation of ideas by freedom of circulation

SEAL



www.InyaTrust.com

www.InyaTrust.com

32. ಈ ಕೆಳಗಿನವುಗಳ ಪೈಕಿ ಯಾವುದು ಕಾನೂನುಬದ್ಧ ಸಭೆಯಾಗಿದೆ ?
(1) ನಿರಾಯುಧವಾದ, ಅಹಿಂಸಾತ್ಮಕ ಮತ್ತು ಶಾಂತತಾಪೂರ್ಣವಾದ ಸಭೆ
(2) ಯಾವುದೊಂದು ವ್ಯಕ್ತಿನ ಸ್ವಾಧೀನವನ್ನು ಬಲವಂತವಾಗಿ ಪಡೆಯಲು ಸೇರಿದ ಸಭೆ
(3) ಅಪರಾಧಿಕ ಬಲಪ್ರಯೋಗದಿಂದ ಸರಕಾರವನ್ನು ಬೆದರಿಸುವ ಉದ್ದೇಶದಿಂದ ಸೇರಿದ ಸಭೆ
(4) ಯಾವುದೊಂದು ಕಾನೂನನ್ನು ಅಥವಾ ಕಾನೂನು ಪ್ರಕ್ರಿಯೆಯ ಜಾರಿಗೊಳಿಸುವಿಕೆಯನ್ನು ವಿರೋಧಿಸುವ ಉದ್ದೇಶದಿಂದ ಸೇರಿದ ಸಭೆ

33. ಒಂದೇ ಅಪರಾಧಕ್ಕೆ ಎರಡು ಸಲ ಶಿಕ್ಷೆ (ಡಬಲ್ ಜಿಯೋಪಾರ್ಡಿ) ಸಿದ್ಧಾಂತ ಎಂದರೆ
(1) ಒಂದೇ ವ್ಯಕ್ತಿಯನ್ನು ಎರಡು ಪ್ರಕರಣಗಳಿಗೆ ಸಂಬಂಧಿಸಿ ಅಧಿವಿಚಾರಣೆಗೆ ಒಳಪಡಿಸುವುದು
(2) ಇಬ್ಬರು ಪ್ರತ್ಯೇಕ ಆರೋಪಿಗಳಿಗೆ ಎರಡು ಪ್ರತ್ಯೇಕ ಅಧಿವಿಚಾರಣೆ ನಡೆಸುವುದು
(3) ಎರಡು ಅಪರಾಧಗಳಿಗೆ ಸಂಬಂಧಿಸಿ ಒಬ್ಬ ವ್ಯಕ್ತಿಗೆ ಅಧಿವಿಚಾರಣೆಗೆ ಒಳಪಡಿಸುವುದು
(4) ಒಂದೇ ಅಪರಾಧಕ್ಕೆ ಒಂದೇ ವ್ಯಕ್ತಿಯನ್ನು ಎರಡು ಬಾರಿ ಅಧಿವಿಚಾರಣೆ ನಡೆಸಿ ಶಿಕ್ಷೆಗೊಳಪಡಿಸುವುದು

34. ಸ್ವ ಅಪರಾಧ ಸಾಕ್ಷ್ಯ ನಿರ್ಬಂಧ (ಸೆಲ್ಫ್-ಇನ್‌ಕ್ರಿಮಿನೇಷನ್) ಎಂದರೆ
(1) ಒಬ್ಬ ವ್ಯಕ್ತಿಯು ಇನ್ನೊಬ್ಬನ ವಿರುದ್ಧ ಸಾಕ್ಷ್ಯ ನೀಡುವುದನ್ನು ಪ್ರತಿಬಂಧಿಸುವುದು
(2) ಒಬ್ಬ ವ್ಯಕ್ತಿಯು ತನ್ನದೇ ವಿರುದ್ಧ ಸಾಕ್ಷ್ಯ ನೀಡುವುದನ್ನು ಪ್ರತಿಬಂಧಿಸುವುದು
(3) ಒಬ್ಬ ಆರೋಪಿಯು ಸಹ ಆರೋಪಿಯ ವಿರುದ್ಧ ಸಾಕ್ಷ್ಯ ನೀಡುವುದನ್ನು ಪ್ರತಿಬಂಧಿಸುವುದು
(4) ಯಾವುದೇ ಪ್ರಕರಣದಲ್ಲಿ ಸಾಕ್ಷ್ಯ ನುಡಿಯದಂತೆ ಒಬ್ಬ ಆರೋಪಿಯನ್ನು ಪ್ರತಿಬಂಧಿಸುವುದು

35. ''ಕಾನೂನಿನ ಮೂಲಕ ನಿಗದಿಗೊಳಿಸಲಾದ ಪ್ರಕ್ರಿಯೆಗನುಸಾರವಾಗಿ ಅಲ್ಲದೇ ಯಾವೊಬ್ಬನಿಗೂ ಪ್ರಾಣಹಾನಿಯಾಗುವಂತೆ ಅಥವಾ ದೈಹಿಕ ಸ್ವಾತಂತ್ರ್ಯವಿಲ್ಲದಂತೆ ಮಾಡತಕ್ಕದ್ದಲ್ಲ'' ಎಂಬುದು ಈ ಕೆಳಗಿನ ಯಾವ ಅನುಚ್ಛೇದದ ಪ್ರಕಾರ ಕೊಡಮಾಡಿದೆ ?
(1) ಅನುಚ್ಛೇದ 12 (2) ಅನುಚ್ಛೇದ 19
(3) ಅನುಚ್ಛೇದ 21 (4) ಅನುಚ್ಛೇದ 22

36. ಈ ಕೆಳಗಿನ ಯಾವ ಅನುಚ್ಛೇದದ ಪ್ರಕಾರ ಶೈಕ್ಷಣಿಕ ಹಕ್ಕು ಮೂಲಭೂತ ಹಕ್ಕಾಗಿದೆ ?
(1) ಅನುಚ್ಛೇದ 13 (2) ಅನುಚ್ಛೇದ 14
(3) ಅನುಚ್ಛೇದ 20 (4) ಅನುಚ್ಛೇದ 21A

37. ಅನುಚ್ಛೇದ 29 ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿಲ್ಲ ?
(1) ಭಾಷೆ (2) ಲಿಪಿ
(3) ಸಂಸ್ಕೃತಿ (4) ಲಿಂಗ

38. ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರಕಾರ ಈ ಕೆಳಗಿನ ಯಾವ ಅನುಚ್ಛೇದವಿಲ್ಲದಿದ್ದರೆ ಮೂಲಭೂತ ಹಕ್ಕುಗಳ ಘೋಷಣೆಯು ಅರ್ಥಹೀನವಾಗುತ್ತದೆ ?
(1) ಅನುಚ್ಛೇದ 32 (2) ಅನುಚ್ಛೇದ 20
(3) ಅನುಚ್ಛೇದ 22 (4) ಅನುಚ್ಛೇದ 21

39. 91ನೇ ಸಂವಿಧಾನದ ತಿದ್ದುಪಡಿಯ ಪ್ರಕಾರ ಮುಖ್ಯಮಂತ್ರಿಯನ್ನು ಸೇರಿ ಮಂತ್ರಿಮಂಡಲದ ಸದಸ್ಯರ ಗರಿಷ್ಠ ಮಿತಿಯು ಕೆಳಗಿನ ಯಾವುದನ್ನು ಮೀರಬಾರದು ?
(1) ರಾಜ್ಯದ ವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯೆಯ ಶೇಕಡಾ 10ರಷ್ಟು
(2) ರಾಜ್ಯದ ವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯೆಯ ಶೇಕಡಾ 20ರಷ್ಟು
(3) ರಾಜ್ಯದ ವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯೆಯ ಶೇಕಡಾ 25ರಷ್ಟು
(4) ರಾಜ್ಯದ ವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯೆಯ ಶೇಕಡಾ 15ರಷ್ಟು

40. ರಾಜ್ಯ ವಿಧಾನಸಭೆಯ ಸದಸ್ಯನಾಗಲು ಈ ಕೆಳಗಿನ ಯಾವುದು ಒಂದು ಅನರ್ಹತೆಯಾಗಿದೆ ?
(1) ಭಾರತದ ನಾಗರಿಕನಾಗಿರುವುದು
(2) 25 ವರ್ಷಗಳಿಗಿಂತ ಕಡಿಮೆಯಿಲ್ಲದ ವಯಸ್ಸಾಗಿರುವುದು
(3) ಕೇಂದ್ರ ಅಥವಾ ರಾಜ್ಯ ಸರಕಾರದ ಒಂದು ಲಾಭದಾಯಕ ಹುದ್ದೆಯನ್ನು ಹೊಂದಿರುವುದು
(4) ಮೇಲಿನದು ಯಾವುದೂ ಅಲ್ಲ



www.InyaTrust.com

www.InyaTrust.com

32. Which of the following is a lawful assembly ?
    (1) An assembly which is non-violent, unarmed and peaceable
    (2) An assembly formed for obtaining possession of any property by force
    (3) An assembly formed to overave the Government by means of criminal force
    (4) An assembly to resist the execution of any law or legal process

33. Double jeopardy means
    (1) Trial of two cases of same persons
    (2) Two separate trials for two separate accused
    (3) Trial of accused for two offences
    (4) Trying and convicting twice a person for the same offence

34. The prohibition against self-incrimination means
    (1) Prohibiting a person from giving evidence against the another
    (2) Prohibiting an accused to be a witness against himself
    (3) Prohibiting an accused from giving evidence against co-accused
    (4) Prohibiting an accused from giving evidence in any case

35. "No person shall be deprived of his life or a personal liberty except according to procedure established by law" is conferred by
    (1) Article 12 (2) Article 19
    (3) Article 21 (4) Article 22

36. Right to education is a fundamental right under
    (1) Article 13 (2) Article 14
    (3) Article 20 (4) Article 21A

37. Article 29 is not concerned with one of the following
    (1) Language (2) Script
    (3) Culture (4) Gender

38. The declaration of fundamental rights without which of the following becomes meaningless according to Dr. B.R. Ambedkar ?
    (1) Article 32 (2) Article 20
    (3) Article 22 (4) Article 21

39. As per the 91st Amendment to the Constitution the maximum limit of number of Ministers to be appointed to the Council of Ministers including the Chief Minister is
    (1) 10 percent of the total number of members of the Legislative Assembly of that State
    (2) 20 percent of the total number of members of the Legislative Assembly of that State
    (3) 25 percent of the total number of members of the Legislative Assembly of that State
    (4) 15 percent of the total number of members of the Legislative Assembly of that State

40. Which of the following is a disqualification to be a member of the State Legislative Assembly ?
    (1) A citizen of India
    (2) Not less than 25 years
    (3) Holding an office of profit under the Central or State Government
    (4) None of the above



SEAL

www.InyaTrust.com

www.InyaTrust.com

41. ಯಾವುದೇ ಒಂದು ಅಪರಾಧಕ್ಕೆ, ಶಿಕ್ಷೆಗೊಳಗಾದ ವ್ಯಕ್ತಿಯ ಶಿಕ್ಷೆಯನ್ನು ಬದಲಿಸುವ (ಕೊಮ್ಯುಟ್) ಅಧಿಕಾರ ರಾಜ್ಯಪಾಲರಿಗೆ ಇದೆ ಎಂಬುದರ ಅರ್ಥ ಏನೆಂದರೆ
(1) ಒಬ್ಬ ವ್ಯಕ್ತಿಗೆ ನೀಡಿದ ಪೂರ್ಣ ಶಿಕ್ಷೆಯಿಂದ ವಿಮೋಚನೆಗೊಳಿಸುವುದು
(2) ಶಿಕ್ಷೆಯ ಪ್ರಮಾಣವನ್ನು ಕಡಿಮೆ ಮಾಡುವುದು
(3) ಒಂದು ವಿಧದ ಶಿಕ್ಷೆಯನ್ನು ಇನ್ನೊಂದು ವಿಧದ ಶಿಕ್ಷೆಯನ್ನಾಗಿ ಬದಲಾಯಿಸುವುದು
(4) ಶಿಕ್ಷೆಯ ಸ್ವರೂಪವನ್ನು ಬದಲಾಯಿಸದೇ ಕೇವಲ ಶಿಕ್ಷೆಯ ಪ್ರಮಾಣವನ್ನು ಮಾತ್ರ ಕಡಿಮೆಗೊಳಿಸುವುದು

42. ಅಧಿವೇಶನದ ಮುಂದೂಡುವಿಕೆ (ಪ್ರೊರೋಗ್) ಎಂಬುದರ ಅರ್ಥ
(1) ವಿಧಾನಮಂಡಲದ ಎರಡೂ ಸದನಗಳನ್ನು ಅಂತ್ಯಗೊಳಿಸುವುದು
(2) ವಿಧಾನಮಂಡಲದ ಎರಡೂ ಸದನಗಳ ಕಲಾಪಗಳಿಗೆ ಕರೆ ನೀಡುವುದು
(3) ಅಧಿವೇಶನವನ್ನು ತಾತ್ಕಾಲಿಕವಾಗಿ ಮುಂದೂಡುವುದು
(4) ವಿಧಾನಮಂಡಲವನ್ನು ಅಂತ್ಯಗೊಳಿಸದೇ ಅಧಿವೇಶನವನ್ನು ಮಾತ್ರ ಕೊನೆಗೊಳಿಸುವುದು

43. ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳನ್ನು ಈ ಕೆಳಗಿನವರಲ್ಲಿ ಯಾರು ನೇಮಕ ಮಾಡುತ್ತಾರೆ ?
(1) ರಾಜ್ಯದ ಮುಖ್ಯ ನ್ಯಾಯಮೂರ್ತಿಗಳು
(2) ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು
(3) ರಾಷ್ಟ್ರಪತಿ
(4) ಪ್ರಧಾನಮಂತ್ರಿ

44. ಈ ಕೆಳಗಿನವರಲ್ಲಿ ಯಾರು ರಾಜ್ಯಪಾಲರಿಗೆ ಪ್ರಮಾಣವಚನವನ್ನು ಬೋಧಿಸುತ್ತಾರೆ ?
(1) ರಾಷ್ಟ್ರಪತಿ
(2) ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ
(3) ಆಯಾ ರಾಜ್ಯದ ಮುಖ್ಯ ನ್ಯಾಯಮೂರ್ತಿ
(4) ಪ್ರಧಾನಮಂತ್ರಿ

45. ಸಂವಿಧಾನದ ಅನುಸಾರ ರಾಜ್ಯದ ಕಾರ್ಯಾಂಗ ಶಕ್ತಿಯು ಈ ಕೆಳಗಿನ ಯಾರಲ್ಲಿ ನಿಹಿತವಾಗಿದೆ ?
(1) ಮುಖ್ಯಮಂತ್ರಿ (2) ರಾಜ್ಯಪಾಲ
(3) ಸಭಾಪತಿ (4) ಯಾವುದೇ ಮಂತ್ರಿ

46. ಸಂವಿಧಾನದ ಭಾಗ 3ರಲ್ಲಿ ಹೇಳಿದ ಮೂಲಭೂತ ಹಕ್ಕುಗಳಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಸೇರಿಲ್ಲ ?
(1) ಸಮಾನತೆಯ ಹಕ್ಕು
(2) ಆಸ್ತಿಯ ಹಕ್ಕು
(3) ಸಂವಿಧಾನಿಕ ಪರಿಹಾರಗಳ ಹಕ್ಕು
(4) ಸ್ವಾತಂತ್ರ್ಯದ ಹಕ್ಕು

47. ಸಂವಿಧಾನಬದ್ಧವಾದ ಕಾನೂನಿನಿಂದ ಸಂವಿಧಾನ ಬಾಹಿರವಾದ ಭಾಗವನ್ನು ಮಾತ್ರ ಬೇರ್ಪಡಿಸಿ ಅದನ್ನು ಶೂನ್ಯ ಅಥವಾ ಅಸಂವಿಧಾನಿಕ ಎಂದು ಘೋಷಿಸುವ ತತ್ವವನ್ನು ಪಾರಿಭಾಷಿಕವಾಗಿ ಈ ಕೆಳಗಿನಂತೆ ಕರೆಯುತ್ತಾರೆ
(1) ಆಚ್ಛಾದನಾ ಸಿದ್ಧಾಂತ (ಡಾಕ್ಟ್ರಿನ್ ಆಫ್ ಎಕ್ಲಿಪ್ಸ್)
(2) ನಿರಾಕರಣಾ ಸಿದ್ಧಾಂತ (ಡಾಕ್ಟ್ರಿನ್ ಆಫ್ ವೈವರ್)
(3) ವಿಂಗಡಣಾ ಸಿದ್ಧಾಂತ (ಡಾಕ್ಟ್ರಿನ್ ಆಫ್ ಸೆವೆರೆಬಿಲಿಟಿ)
(4) ಮೇಲಿನದು ಯಾವುದೂ ಅಲ್ಲ

48. ಸಮಾನಸ್ಕರನ್ನು ಒಂದೇ ರೀತಿಯಲ್ಲಿ ನೋಡಬೇಕೆಂಬ ತತ್ವವು ಈ ಕೆಳಗಿನ ಯಾವುದರಿಂದ ಹೊರಹೊಮ್ಮಿದೆ ?
(1) ಕಾನೂನಿನ ಎದುರು ಸಮಾನತೆಯ ಹಕ್ಕು
(2) ಸಾಂಘಿಕ ಹಕ್ಕು
(3) ಶೈಕ್ಷಣಿಕ ಹಕ್ಕು
(4) ಔದ್ಯೋಗಿಕ ಹಕ್ಕು

49. ರಾಜ್ಯ ಸರಕಾರಕ್ಕೆ ಈ ಕೆಳಗಿನವರ ಪೈಕಿ ಯಾರು ಕಾನೂನು ಸಲಹೆಗಾರರು ಆಗಿರುತ್ತಾರೆ ?
(1) ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ
(2) ಕಾನೂನು ಕಾರ್ಯದರ್ಶಿ
(3) ಮಹಾನ್ಯಾಯವಾದಿ
(4) ಈ ಮೇಲಿನ ಎಲ್ಲರೂ

50. ಅನುಚ್ಛೇದ 15ರ ಅಡಿಯ ಹಕ್ಕು ಈ ಕೆಳಗಿನವರಲ್ಲಿ ಯಾರಿಗೆ ಕೊಡಲಾಗಿದೆ ?
(1) ಭಾರತದಲ್ಲಿ ವಾಸಿಸುವ ಪ್ರತಿಯೊಬ್ಬ ವ್ಯಕ್ತಿಗೆ
(2) ಭಾರತೀಯ ನಾಗರಿಕನಿಗೆ ಮಾತ್ರ
(3) ನಾಗರಿಕ ಮತ್ತು ನಾಗರಿಕನಲ್ಲದ ವ್ಯಕ್ತಿಗೆ
(4) ಅನಿವಾಸಿ ಭಾರತೀಯನಿಗೆ



www.InyaTrust.com

www.InyaTrust.com

41. The Governor has power to commute the sentence of any person convicted of any offence means
(1) Absolve the offender from all the sentences and punishments
(2) To reduce the amount of sentence
(3) Exchange of one type of sentence to another type of sentence
(4) Reduction of the amount of sentence with or without changing its character

42. Prorogation of a Session means
(1) Ending the life of both the Houses of Legislature of State
(2) Summon each house of the State Legislature
(3) Temporarily postpone the Session
(4) To end that Session and not the life of the house

43. The Judges of the High Court are appointed by
(1) Chief Justice of the High Court
(2) Chief Justice of India
(3) President of India
(4) Prime Minister

44. Who among the following four is required to administer an oath or affirmation to the Governor ?
(1) President of India
(2) Chief Justice of India
(3) Chief Justice of the High Court
(4) Prime Minister

45. The Executive Power of the State is vested in
(1) Chief Minister
(2) The Governor
(3) Chairman of Vidhan Sabha
(4) Any Minister

46. The fundamental rights under Chapter III of the Constitution does not include one of the following
(1) Right to equality
(2) Right to property
(3) Right to constitutional remedies
(4) Right to freedom

47. "If an offending provision can be separated from that which is Constitutional, then only that part which is offending is to be declared as void and not the entire statute", the said principle is technically known as
(1) Doctrine of eclips
(2) Doctrine of waiver
(3) Doctrine of severability
(4) None of the above

48. The principle that the like must be treated alike emanates from
(1) Right to equality before law
(2) Right of Assembly
(3) Right to Education
(4) Right to Profession

49. Who is legal advisor to the State Government ?
(1) Chief Justice of High Court
(2) Law Secretary
(3) Advocate General
(4) All the above

50. The guarantee under Article 15 is available
(1) To every person residing in India
(2) Only to the citizen of India
(3) Every person whether citizen or non citizen
(4) A Non resident Indian

SEAL



www.InyaTrust.com

www.InyaTrust.com

**DO NOT OPEN THIS BOOKLET UNTIL YOU ARE ASKED TO DO SO**

| 7031 2013 (2) |
|---|

**Version Code**

**F**

**GENERAL LAW**
**(PART – II)**

Shahina.

**Reg. No.**

***Time Allowed : 2 Hours*** ***Maximum Marks : 100***

## INSTRUCTIONS TO CANDIDATES

1. Remove the paper seal at the right side to open this booklet only after the second bell at **10.00 A.M.** ***(I session)*** **and 2.00 P.M.** ***(II session)***.
2. Immediately after the commencement of the Examination, you should check that this Booklet does not have any unprinted or torn or missing pages or items, etc. If any of the above defects is found, get it replaced by a Complete Question Booklet of the available series.
3. **Please note that it is the candidate's responsibility to encode and fill in the Roll Number and Version Code A, B, C, D, E, F, G or H carefully and without any omission or discrepancy at the appropriate places in the OMR Answer Sheet. Any omission/discrepancy will render the Answer Sheet liable for rejection.**
4. This Test Booklet contains **50** items (questions). Each item is printed both in Kannada and English, except for Questions relating to English Language Comprehension which are in English only. Each item comprises four responses (answers). You will select the response which you want to mark on the Answer Sheet. In case, you feel that there is more than one correct response, mark the response which you consider the best. In any case, choose ***ONLY ONE*** response for each item.
5. All the answers should be marked only on the OMR sheet provided and only with a **black or blue** ink ball point pen. ***"Instructions to Candidates"*** made available along with the admission ticket may be referred to wherein the method of marking responses carefully is incorporated. If more than one circle is darkened for a given question no marks will be awarded.
6. Use only the Rough Sheets provided at the end of the Question Booklet / rough sheets provided by the Commission, to make any calculations. You should not make any marking on any part of the Question Booklet.
7. Questions are in both English and Kannada. If any confusion arises in the Kannada version, please refer to the English version of the questions.
8. Use of calculators or any other electronic gadgets is prohibited inside the examination Hall.
9. Immediately after the final bell indicating the closure of the examination, stop making any further markings in the OMR Answer Sheet. Be seated till the Answer Sheet is collected. After handing over the Answer Sheet to the Invigilator and after you have been permitted by the Invigilator to leave, you may leave the examination hall.

| ಗಮನಿಸಿ : ಸೂಚನೆಗಳ ಕನ್ನಡ ಆವೃತ್ತಿಯು ಈ ಪುಸ್ತಿಕೆಯ ಮುಂಭಾಗದಲ್ಲಿ ಮುದ್ರಿಸಲ್ಪಟ್ಟಿದೆ. |
|---|

www.InyaTrust.com